122(2)

"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 23] ಬುಧವಾರ 10—10—45 [ಬಿಡಿ ಪ್ರತಿ 3 ಪೈ

ಪ್ರ. ಪ್ರ. ಸಭೆ ಪ್ರಾರಂಭ

ಕಾಂಗ್ರೆಸ್ ಪಕ್ಷದ ಸಭಾ ಪರಿತ್ಯಾಗ

ಪ್ರಜಾಪ್ರತಿನಿಧಿ ಸಭೆ

(ನಮ್ಮ ಖಾಸಗಿ ಪ್ರತಿನಿಧಿಯಿಂದ)

ಮೈಸೂರು ಅ 10

12-5 ಘಂಟೆಗೆ ಪ್ರಧಾನಶಿರೋಮಣಿ ದಿವಾನ್ ಶ್ರೀ ಮಾಧವರಾಯರ ಅಧ್ಯಕ್ಷತೆಯಲ್ಲಿ ಇಂದಿನ ದಸರಾ ಅಧಿವೇಶನವು ಪ್ರಾರಂಭವಾಯಿತು.

ಅಧ್ಯಕ್ಷರ ಭಾಷಣವಾಗಿಗೊಡನೆ ಕಾಂಗ್ರೆಸ್ ಪಕ್ಷದ ಶ್ರೀ ಪಾಲಪಳ್ಳಿ ಸೀತಾರಾಮಯ್ಯನವರು ಭಾಷಣಕ್ಕೆ ಮುನ್ನ ತಾವು ಮಾತನಾಡುವುದಾಗಿ ತಿಳಿಸಿದರು. ಅಧ್ಯಕ್ಷರು ಗಮನ ಕೊಡಲಿಲ್ಲ. ಪುನಃ ಶ್ರೀ ಸೀತಾರಾಮಯ್ಯನವರು ಅದೇ ಪ್ರಲಾಪವನ್ನು ಮಾಡಿದರು. 'ಭಾಷಣ ಪ್ರಾರಂಭವಾಗಿದೆ ಸಾಧ್ಯವಿಲ್ಲ' ಎಂದರು ಅಧ್ಯಕ್ಷರು. ಇದನ್ನು ಪ್ರತಿಭಟಿಸುವ ಸಲುವಾಗಿ ಶ್ರೀ ಸೀತಾರಾಮಯ್ಯನವರು ತಮ್ಮ ಪಕ್ಷದೊಡನೆ ಸಭಾಪರಿತ್ಯಾಗ ಮಾಡಿದರು.

ಸಭಾಪರಿತ್ಯಾಗ ನಡೆಯುತ್ತಿರುವಾಗ ಭವನದ ದೊಡ್ಡದಾದ ಬಾಗಿಲ ಹತ್ತಿರ ಕುಳಿತಿದ್ದ ಶ್ರೀ ಪಾವುಗಡ ನಂಜುಂಡರಾಯರು 'ಅಧ್ಯಕ್ಷ ಭಾಷಣಕ್ಕೆ ಮುಂಚೆ ಏನೂ ಕೂಡದು' ಎಂದು ಪ್ರತಾಪ ರಾಣಿಯಲ್ಲಿ ನುಡಿದರು.

ಅಧ್ಯಕ್ಷ ಭಾಷಣದ ಕನ್ನಡಾನುವಾದವನ್ನು ಶ್ರೀ ಬಿ. ಎಸ್. ರಾಜಾರಾಯರು ಓದಿದರು.

ಅಧ್ಯಕ್ಷ ಭಾಷಣಾನಂತರ ಕಾಂಗ್ರೆಸ್ ಪಕ್ಷವು ಸಭೆಗೆ ಬಂದಿತು. ಕಾಂಗ್ರೆಸ್ ಪಕ್ಷಕ್ಕೂ ಶ್ರೀ ನಂಜುಂಡರಾಯರಿಗೂ ಕ್ರಿಯಾಲೋಪದ ಯುದ್ಧ ಪ್ರಾರಂಭವಾಯಿತು.

[ಅಧ್ಯಕ್ಷರ ಭಾಷಣದ ಸಾರಾಂಶವು ನಾಳೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು]

ರಾಜಾಜಿ ಭಾಷಣ

ಬೆಂಗಳೂರಿನಲ್ಲಿ ತಾ || 8 ರಲ್ಲಿ ಮದರಾಸಿದ ಶ್ರೀ ರಾಜಾಜಿಯವರು ಕಾಂಗ್ರೆಸ್ ಕಛೇರಿ ಆವರಣದಲ್ಲಿ, ಕಾಂ || ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮಾಡಿದ ಭಾಷಣದಲ್ಲಿ ಕೃಷ್ಣಗಿರಿಯಲ್ಲಿ ಜವಾಬ್ದಾರಿ ಸರಕಾರದ ಅವಶ್ಯಕತೆ ವಿಷಯವನ್ನು ತಿಳಿಸಿದರು.

Stop Press

ದೇಶವಾವುದೇ ಆಗಿರಲಿ ಸ್ವಾತಂತ್ರ್ಯ ಪ್ರಶ್ನೆಯೆಲ್ಲಾ ಒಂದೇ

ಅದಕ್ಕಾಗಿ ನೇನೆ ಸಲ್ಲಿಸಲು ನಾನು ಸಿದ್ಧನಿದ್ದೇನೆ

ಡಾ || ಸೊಕರ್ನೋ ಆಹ್ವಾನದ ಒಗ್ಗೆ ನೆಹರೂರವರ ಆಮೋಘ ಹೇಳಿಕೆ

ಲಕ್ನೋ, ತಾ 8

'ಭಾರತ ದೇಶದಲ್ಲಿ ಯಾವುದೇ ಅವಶ್ಯಕ ಕಾರ್ಯವಿರಲಿ, ನಾನು ಜಾವಾಕ್ಕೆ ಭೇಟಿಕೊಡಲು ತಯಾರಾಗಿದ್ದೇನೆ. ದೇಶವಾವುದಾದರೇನು ! ಸ್ವಾತಂತ್ರ್ಯ ಪ್ರಶ್ನೆಯೆಲ್ಲಾ ಒಂದೇ ! ನನ್ನಿಂದ ಇಂಡೋನೇಷಿಯರಿಗೆ ಕೈಲಾದ ಸೇವೆ ಅವರ ಸ್ವಾತಂತ್ರ್ಯ ಸಮರದಲ್ಲಿ ಅವಶ್ಯವಿದ್ದರೆ ಕೊಡುವೆನು. ಡಾ || ಸುಕರ್ನೋ ಮುಂತಾದವರು ಸ್ವಾತಂತ್ರ್ಯ ಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಲಿ' ಎಂಬುದಾಗಿ ಡಾ || ಸುಕರ್ನೋ ಆಹ್ವಾನವನ್ನು ಕುರಿತು ಪಂಡಿತ್ ನೆಹರೂ ಹೇಳಿಕೆಯಿತ್ತಿದ್ದಾರೆ.

ಶ್ರೀ ಅಪ್ಪಾಜಿಗೌಡರಿಗೆ ರಜಾ

ಶ್ರೀ ಜೆ ಅಪ್ಪಾಜಿಗೌಡರಿಗೆ ಇದೇ 16 ನೇ ತಾರೀಖಿನಿಂದ ಹತ್ತು ದಿವಸಗಳವರೆವಿಗೆ ಪ್ರಿವಿಲೇಜ್ ಲೀವ್ ಕೊಡಲಾಗಿದೆ. ಈ ಸಂದರ್ಭದಲ್ಲಿ ಸರ್ಕಾರದ ಅಡಿಷನಲ್ ಕಾರ್ಯದರ್ಶಿ ಶ್ರೀ ಎಚ್. ಮಾಧವರಾಯರು ಶ್ರೀ ಅಪ್ಪಾಜಿಗೌಡರ ಛಾರ್ಜಿನಲ್ಲಿರುವರು.

ದಿವಾನರಿಂದ ಅರಂಭೋತ್ಸವ

ಇದೇ 18, 19, 20, ರಲ್ಲಿ ನಡೆಯುವ ಶಾರದ ವಿಲಾಸ ಹೈಸ್ಕೂಲಿನ ರಜತೋತ್ಸವದ ಆರಂಭೋತ್ಸವವನ್ನು ಪ್ರಧಾನ ಶಿರೋವಣಿ ಎಚ್. ಮಾಧವರಾಯರು ನೆರವೇರಿಸುವರು.

ಸಿಲೋನ್ ಯುವಕರಿಗೆ ಕಳಿಸಿರುವ ಸಂದೇಶದಲ್ಲಿ ಭಾರತ – ಲಂಕಾ ಒಮ್ಮತವಾಗಿರಬೇಕೆಂದು ತಿಳಿಸಿರುವರು.

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವು ಮುಂದಿನ ಮಾಹೆ 11, 12 ರಲ್ಲಿ ಕೇತ್ಯಾ ಹಳ್ಳಿಯಲ್ಲಿ ನೆರವೇರುವುದು.

ಶ್ರೀ ಪುಲ್ಲರೆಡ್ಡಿಯವರು ಈ ದಿವಸ ರಾಜಧಾನಿಗೆ ಆಗಮಿಸುವರು.

ಬೊಂಬಾಯಿನ ಪರಿಸ್ಥಿತಿ ಸಂಪೂರ್ಣ ಶಾಂತವಾಗಿದೆ.

ವಿದೇಶ ತರಂಗ

ಸಿಂಗಪುರದಲ್ಲಿ ಭಾರತೀಯ ರನೇಕರು ಯುದ್ಧ ಖೈದಿಗಳೆಂಬ ಆರೋಪಣೆ ಮೇರೆ ಬಂಧಿಸಲ್ಪಟ್ಟರು. ಪುನಃ ಬಿಡುಗಡೆಯಾಗಿದೆ.

ಪ್ಯಾಲಿಸ್ತೀನಲ್ಲಿ ಅರಬೆಲ್ಲರ ದಂಗೆ ಮುಗಿಯುತ್ತಾ ಬಂದಿದೆ. ತಾ || 8 ರಲ್ಲಿ ಅರಬರು ಕೋರ್ಟಿಗೆ ಬರಲು ನಿರಾಕರಿಸಿದರು. ಅವರ ಪರ ವಕೀಲರುಗಳೂ ಇರಲಿಲ್ಲ.

ಈ ತಿಂಗಳು ಅರ್ಧ ರಾತ್ರಿ ನಂತರ 2 ಗಂಟೆ ಸಮಯದಲ್ಲಿ ಸ್ಟ್ಯಾಂಡರ್ಡ್ ಟೈಂ 1 ಗಂಟೆ ಹಿಂದಕ್ಕೆ ಇಡಲಾಗುವುದೆಂದು ಭಾರತ ಸರ್ಕಾರದ ಪ್ರಕಟಣೆ. 1942 ನೇ ಸಪ್ಟಂಬರ್ 1 ರಿಂದ 1 ಗಂಟೆ ಮುಂದೆ ಹಾಕಲಾಗಿತ್ತು.

ತುಮಕೂರಿನಲ್ಲಿ ಕಳೆದ ಪೌರಸಭಾ ಮಿಾಟಿಂಗಿನಲ್ಲಿ ಆ ಊರಿನ ನೀರಿನ ಸರ್ಕಾರ್ಕ್ಕೆ 150000 ರೂ. ಯೋಜನೆಯೊಂದು ಅಂಗೀಕರಿಸಲಾಯಿತು.

ಶಿವಮೊಗ್ಗಾ ಪೌರಪಿತೆಯವರು ಐದೂವರೆ ಲಕ್ಷ ರೂ ಖರ್ಚಿನಿಂದ ಭೂಮಿಯೊಳಗೆ ಚರಂಡಿ ಮಾಡಲು ತೀರ್ಮಾನಿಸಿರುವರು.

ಜಪಾನಿನ ಹೊಸ ಮಂತ್ರಿಮಂಡಲವು ವೈಕಾರ್ಥರಿಂದ ಅಂಗೀಕೃತವಾಗಿದೆ.

ಮೈಸೂರು ಪ್ರಜಾಪಕ್ಷದ ಅಧಿವೇಶನವು ರಾಜಧಾನಿಯ ಟೌನ್‌ಹಾಲಿನಲ್ಲಿ ತಾ || 16 ರ ಬೆಳಿಗ್ಗೆ ನಡೆಯುವುದಾಗಿ ತಿಳಿಯಬಂದಿದೆ.

ಮಧುಗಿರಿ ಸಬ್ ಜೈಲಿನಿಂದ ಕೆಲವು ದಿನಗಳ ಹಿಂದೆ ಇಬ್ಬರು ಖೈದಿಗಳು ಪರಾರಿಯಾಗಿರುವರೆಂದೂ, ಪೋಲೀಸರು ಪತ್ತೇ ತರಯಾದು ನಡೆಸುತ್ತಿರುವರೆಂದೂ ತಿಳಿಯಬಂದಿದೆ.

"ಸತ್ಯವಾದಿ"ಯ ಸ್ಥಾಪಕರ
ಸ್ಮಾರಕಕ್ಕಾಗಿ
ನಾಳೆ ಪತ್ರಿಕೆಗೆ ರಜಾ

ನಾಲ್ಕರಲ್ಲಿ ಮೂರು ದೊರೆತವು

ನಾಲ್ಕು ಸ್ವಾತಂತ್ರ್ಯಗಳನ್ನು ಸಾರಿ ಪುಡಿದ ಅಧ್ಯಕ್ಷ ರೂಸ್ವೆಲ್ಟರ ಸಮಾಧಿ ಮೇಲಿನ ಮಣ್ಣು ಇನ್ನೂ ಗಟ್ಟಿಯಾಗಿಲ್ಲ. ಅಷ್ಟರಲ್ಲೇ ಮೂರು ಸ್ವಾತಂತ್ರ್ಯಗಳು ದೊರೆತಿವೆ.

ಶಾಂತಿ

ಅರ್ಜಂಟೀನದಲ್ಲಿ ಅಸ್ಪಷ್ಟ !
ಮಲಯದಲ್ಲಿ ಜನವರಿ !
ಜಾವಾದಲ್ಲಿ ಜನ ಜಾಗೃತಿ !
ಸೈಗಾಂನಲ್ಲಿ ಗುಂಡು !
ಈಜಿಪ್ಟ್‌ನಲ್ಲಿ ಗುಜು ಗುಜು !
ಪೆಲೆಸ್ಟೈನಿನಲ್ಲಿ ಹೊಸ ಅಕ್ಕನು !
ಸುಯಾನಲ್ಲಿ ಜೀಣಾ ವಿರೋಧ !
ಬೆಲ್ಜಿಯಮ್ಮಿನಲ್ಲಿ ಅರಸುತನವೋ
ಪ್ರಜಾ ಪ್ರಭುತ್ವವೋ ಎಂಬ ಪ್ರಶ್ನೆ !
ತುರ್ಕಿ ರಷ್ಯ ಮೈಮನಸ್ಸು
ಇನ್ನೂ ತಣಿದಿಲ್ಲ
ಅರಬರ ಟ್ರಿಪೋಲಿಟಾನಾ ಕೇಳಿಕೆ !
ಜಪಾನಿನ ಆಕ್ರಮಣದಲ್ಲಿ
ಮಾನವರೋ ಇಬ್ಬರೋ
ಎಂಬ ಪ್ರಶ್ನೆ
ಭಾರತವಿಡೀ ಜ್ವಾಲಾಮುಖಿ !
ಯುದ್ಧ ಮುಗಿಯಿತು. ಶಾಂತಿ ?

ಂ ಂ

ಆಹಾರ

ಭಾರತದಲ್ಲಿ ಕಡಿಮೆ.
ಜರ್ಮನಿಯಲ್ಲಿ ಅಭಾವ.
ಜಪಾನಿನಲ್ಲಿ ಸಾಕಾಗುವುದಿಲ್ಲ.
ವಧ್ಯಪೂರ್ವದಲ್ಲಿ ಬೇಕಾದಷ್ಟಿಲ್ಲ
ಚೀಣಾದಲ್ಲಿ ಅವ್ಯವಸ್ಥೆ.
ಗ್ರೀಸಿನಲ್ಲಿ ಹಸಿವು ಅಡಗಲಿಲ್ಲ.
ಬರ್ಮಾ–ಮಲಯಗಳು
ಸ್ಥಿಮಿತಕ್ಕೆ ಬಂದಿಲ್ಲ
ಯುದ್ಧ ಮುಗಿಯಿತು. ಹಸಿವು ?

ಂ ಂ

ಅಭಯ

ಜಾವಾದಲ್ಲಿ ಗುಂಡು.
ಸೈಗಾಂನಲ್ಲಿ ಗುಂಡು.
ಗ್ರೀಸಿನಲ್ಲಿ ಒತ್ತಾಯದ ಆಕ್ರಮಣ
ಬರ್ಮಾ ಮಲಯಗಳಲ್ಲಿ ಮುಖಭಾ
ಪೂರ್ವದಂತೆ ರಾಜ್ಯಭಾರ
ಭಾರತದಲ್ಲಿ ಪುಂಡ ಹಸ್ತ
ಯುದ್ಧ ಮುಗಿಯಿತು. ಅಭಯ ?

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಟಿ ಮಾರ್ಕೆಟ್ ಪ್ರದರ್ಶನ

ತಾ 13-10-1945

ಶನಿವಾರ ಬೆಳಿಗ್ಗೆ 8-30 ಘಂಟೆಯಿಂದ 12 ಘಂಟೆಯವರಿಗೆ ದೇವರಾಜ ಮಾರ್ಕೆಟ್ಟಿನಲ್ಲಿ ನಡೆಯುವುದು.

ಪ್ರವೇಶ : ಟಿಕೀಟು ಮೂಲಕ

0–2–0

ಉತ್ತಮ ಪ್ರದರ್ಶನಗಳಿಗೆ ಒಳ್ಳೆಯ ಬಹುಮಾನಗಳು.

ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿಯೂ, ದೇವರಾಜ ಮಾರ್ಕೆಟ್ ಆಫೀಸಿನಲ್ಲಿಯೂ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋಡೆ,
ಪ್ರೆಸಿಡೆಂಟ್.

Office of the Health officer
Mysore City,
Dated 6-10-1945.

Notice

For the last one week, there are no cases of Plague in the city and the public are informed that there is no cause for anxiety. Precautionery measures are vigorously enforced to maintain the state of Public Health of the city in a satisfactory condition.

(Sd) B. Anantha Rao
Health Officer

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ಕಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಿ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

AT Opera—

From 10–10–45

ರಂಜಿಕ್, ಟಿ. ಆರ್. ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣಕ್, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows
From 11-10-45

Tarzan Triumphs

ನ್ಯೂ ಕೃಷ್ಣಾ ಟಾಕೀಸ್

ಮಾರ್ನಿಂಗ್ ಷೋ

ತಾ 11—10—45 ರಿಂದ

"ಬಾಳಾಜಿ"

— ಅಥವಾ —

ತಿರುಪತಿ ವೆಂಕಟೇಶ ಮಹಾತ್ಮೆ



ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಮಾತ್ರ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

At Ranjit Humayun

5 ನೇ ವಾರ

ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಜ್
ಪಾತ್ರ ವಹಿಸಿರುವರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈ ಸೂ ರು.

ಹ ರಾ ಜು ನೋ ಟೀ ಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವುದೇನೆಂದರೆ : —
ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಒಂಗ್ಲಾ ಸೈಟುಗಳನ್ನು ತಾರೀಖು 12–9–1945 ನೇ ಹರಾಜು ಇಸ್ತಿಹಾರ್ ನಾಮೆಯ ಷರತ್ತು ಪ್ರಕಾರ ತಾರೀಖು 20–10–1945 ರಿಂದ 23–10–1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋಡೆ
ಛೇರ್ಮನ್